**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**
**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸೇಶನ ಕೇಸ ನಂಃ 155/2020

ಪಿಡಬ್ಲು : 15 ಸಿಡಬ್ಲು : 17

| | | |
|---|---|---|
| ಸಾಕ್ಷಿಯ ಹೆಸರು | : | ಶ್ರೀ.ಮಡಿವಾಳಪ್ಪ ನಾಯ್ಕರ |
| ತಂದೆಯ ಹೆಸರು | : | ಶ್ರೀ.ಹನಮಂತಪ್ಪ ನಾಯ್ಕರ |
| ವಯಸ್ಸು | : | 42 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ್ತವ್ಯ | : | ಬಸರಕೋಡ |
| ದಿನಾಂಕ | : | 02-03-2026 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ಮೃತ ಬಸವರಾಜ ಮತ್ತು ಆರೋಪಿತರು ನನಗೆ ಗೊತ್ತಿರುತ್ತಾರೆ. ಮೃತ ಬಸವರಾಜ ಮತ್ತು ಆರೋಪಿತರ ನಡುವೆ ಏನು ತಂಟೆ ಇತ್ತು ಎಂದು ನನಗೆ ಗೊತ್ತಿರುವುದಿಲ್ಲ. ನಮ್ಮ ಮನೆಯಿಂದ ಅರ್ಧ ಕಿಲೋಮೀಟರ ದೂರದಲ್ಲಿ ಆರೋಪಿತರ ಮನೆ ಇರುತ್ತದೆ. ಬಸವರಾಜ ಅವರು ತೀರಿಕೊಂಡ ವಿಚಾರ ನನಗೆ ಗೊತ್ತಿರುತ್ತದೆ.

2. ಬಸರಕೋಡ ಗ್ರಾಮದ ಕರೆಮ್ಮ ಗುಡಿ ಬಳಿ ಅಂಬ್ಯುಲೆನ್ಸ ಬಂದಿತ್ತು, ಅದರಲ್ಲಿ ಬಸವರಾಜ ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಲಾಯಿತು ಎನ್ನುವುದು ನನಗೆ ಗೊತ್ತಿರುತ್ತದೆ. ಬಸವರಾಜ ಅವರಿಗೆ ಏನಾಗಿತ್ತು ಎಂದು ನಾನು ನೋಡಿರುವುದಿಲ್ಲ. ಬಸವರಾಜ ಅವರ ಸಾವಿನ ಬಗ್ಗೆ ಪೋಲಿಸರು ನನ್ನನ್ನು ವಿಚಾರಿಸಿ ಹೇಳಿಕೆ ಪಡೆದುಕೊಂಡಿರುವುದಿಲ್ಲ.

**(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ, ಸಾಕ್ಷಿಯ ಹೇಳಿಕೆಯನ್ನು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು**).

**ಪಾಟೀ ಸವಾಲುಃ ವಿಶೇಷ ಸರ್ಕಾರಿ ಅಭಿಯೋಜಕರಿಂದ**

" ನಮ್ಮ ಮನೆಯ ಹತ್ತಿರ ಗೋಪಾಲ ಪಾಗದ ಅವರ ಮನೆ ಇರುತ್ತದೆ ಎನ್ನುವುದು ಸರಿಯಲ್ಲ, ಗೋಪಾಲ ಅವರ ಮನೆಯ ಹಿತ್ತಲಿನಲ್ಲಿ ಜೋರಾಗಿ ಮಾತನಾಡಿದರೆ, ಕೂಗಾಡಿದರೆ ನಮ್ಮ ಮನೆಗೆ ಕೇಳುತ್ತದೆ ಎನ್ನುವುದು ಸರಿಯಲ್ಲ, ಬಸವರಾಜ ಕಳೆದ ಮೂರು ವರ್ಷಗಳ ಹಿಂದೆ ನಮ್ಮೂರ ಮಹಾಂತೇಶ ಕಲ್ಲಪ್ಪ ಪಾಗದ ಇವನ ಹೆಂಡತಿ ನಾಗವ್ವ ಅಲಿಯಾಸ ನಾಗರತ್ನ ಪಾಗದ ಇವಳೊಂದಿಗೆ ಅಸಭ್ಯವಾಗಿ ನಡೆದುಕೊಂಡಿದ್ದರಿಂದ ಮಹಾಂತೇಶ ಪಾಗದ ಹಾಗೂ ಅವರ ಮನೆಯವರು ಬಸವರಾಜನೊಂದಿಗೆ ತಂಟೆ ಮಾಡಿ ಆತನ ಮೇಲೆ ಸಿಟ್ಟಾಗಿದ್ದರು, ಬಸವರಾಜ ದೊಡಮನಿ ಇವನು ನಾಗವ್ವ ಇವಳ ಉಸಾಬರಿ ಮಾಡುವುದನ್ನು ಬಿಟ್ಟಿದ್ದನು, ಆದರೆ ಬಸವರಾಜ ದೊಡಮನಿ ಇವನು ಮಹಾಂತೇಶ ಪಾಗದ ಇವನ ಅಣ್ಣ ಗೋಪಾಲ ಕಲ್ಲಪ್ಪ ಪಾಗದ ಇವನ ಹೆಂಡತಿ ರೇಣುಕಾ ಪಾಗದ ಇವಳೊಂದಿಗೆ ಸಹ ಸಲುಗೆಯಿಂದ ಮಾತನಾಡುವುದು, ಸೆರೆ ಕುಡಿದು ಬಂದು ಅವರ ಮನೆಯ ಕಡೆ ಚಿರಾಡುವುದು ಮಾಡುವುದಲ್ಲದೇ, ಅವನು ರೇಣುಕಾ ಇವಳೊಂದಿಗೆ ಸಲುಗೆಯಿಂದ ಮಾತನಾಡಿಸುತ್ತಾ, ಅವಳ ಕೂಡ ಅಸಭ್ಯವಾಗಿ ವರ್ತಿಸುವುದು, ಮಾತನಾಡುತ್ತಿದ್ದನು ಮತ್ತು ಅವಳೊಂದಿಗೆ ಮೊಬೈಲನಲ್ಲಿ ಮಾತನಾಡುತ್ತಿದ್ದನು, ಅವಳ ಮನೆಯ ಹಿತ್ತಲಿನಲ್ಲಿ ಬಂದು ಬಾಗಿಲು ಬಡೆಯುವುದು, ಕದ ಒದೆಯುವುದು ಮಾಡುತ್ತಿದ್ದನು, ಇದರಿಂದ ರೇಣುಕಾಳ ಗಂಡ ಗೋಪಾಲ ಪಾಗದ ಮತ್ತು ಅವನ ತಮ್ಮ ಮಹಾಂತೇಶ ಪಾಗದ ಇವರು ಬಸವರಾಜ ದೊಡಮನಿ ಇವನ ಮೇಲೆ ಸಿಟ್ಟಾಗಿ ತಂಟೆ ಮಾಡುತ್ತಿದ್ದರು." ಎಂದು ನಾನು ಪೋಲಿಸರ ಮುಂದೆ ಹೇಳಿಕೆ ನೀಡಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ. ಸಾಕ್ಷಿಯ ಹೇಳಿಕೆಯ ಭಾಗವನ್ನು ನಿಪಿ–69 ಎಂದು

ಗುರುತಿಸಲಾಯಿತು.

2. " ದಿನಾಂಕಃ 03-03-2020 ರಂದು ಬೆಳಗಿನ ಜಾವ 1:30 ರ ಸುಮಾರಿಗೆ ನಾನು ಮನೆಯಲ್ಲಿ ಮಲಗಿಕೊಂಡಿದ್ದಾಗ ಗೋಪಾಲ ಪಾಗದ ಇವರ ಮನೆಯ ಕಡೆಗೆ ಬಸವರಾಜ ದೊಡಮನಿ ಇವನು ಚಿರಾಡುವ ಶಬ್ದ ಕೇಳಿಸಿತು, ನಮ್ಮೂರ ಬಸವರಾಜ ರುದ್ರಪ್ಪ ದೊಡಮನಿ ಇವನು, ರೇಣುಕಾ ಹಾಗೂ ಅವಳ ಗಂಡ ಗೋಪಾಲ ಹಾಗೂ ಮೈದುನ ಮಹಾಂತೇಶ ಇವರೊಂದಿಗೆ ಬಾಯಿ ಮಾಡುವ ಸಪ್ಪಳ ಕೇಳಿಸುತ್ತಿತ್ತು, ಆಗ ನಾನು ಆ ಕಡೆ ಹೋಗದೆ ಮಲಗಿಕೊಂಡೆನು, ಮರುದಿನ ಬೆಳಗ್ಗೆ ಎದ್ದು ನೋಡಲು ನಮ್ಮ ಮನೆಯ ಹತ್ತಿರ ಇರುವ ಗೋಪಾಲ ಪಾಗದ ಇವರ ಹಿತ್ತಲದಲ್ಲಿ ಬಸವರಾಜನು ಮಲಗಿಕೊಂಡ ಹಾಗೆ ಬಿದ್ದಿದ್ದನು, ಅವನಿಗೆ ತಲೆಗೆ , ಮುಖಕ್ಕೆ , ಕೈಕಾಲುಗಳಿಗೆ ಗಾಯ ಆಗಿ ಮುಖದ ಮೇಲೆ ರಕ್ತ ಸೊರಾಡುತ್ತಾ ಇತ್ತು, ಈ ವಿಷಯ ಅವರ ಮನೆಯ ಜನರಿಗೆ ಗೊತ್ತಾಗಿ, ಅವರ ಮನೆಯವರೆಲ್ಲರೂ ಬಂದು ಅಂಬ್ಯುಲೆನ್ಸನಲ್ಲಿ ಕಿತ್ತೂರು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದರು." ಎಂದು ನಾನು ಹೇಳಿಕೆ ನೀಡಿದ್ದೇನೆ ಎನ್ನುವುದು ಸರಿಯಲ್ಲ. ಸಾಕ್ಷಿಯ ಹೇಳಿಕೆಯ ಭಾಗವನ್ನು ನಿಪಿ-70 ಎಂದು ಗುರುತಿಸಲಾಯಿತು.

3. ನಂತರ ಮೃತ ಬಸವರಾಜನ ಹೆಂಡತಿ ಮೂರು ಜನ ಆರೋಪಿತರ ಮೇಲೆ ದೂರು ಕೊಟ್ಟಿರುತ್ತಾರೆ ಎನ್ನುವುದು ನನಗೆ ಗೊತ್ತಿಲ್ಲ. ಬಸವರಾಜನ ಹೆಂಡತಿ ಆರೋಪಿತರ ಮೇಲೆ ದೂರು ಕೊಟ್ಟ ವಿಚಾರದಲ್ಲಿ ಪೋಲಿಸರು ನನ್ನನ್ನು ವಿಚಾರಿಸಿದ್ದು, ನಾನು ನಿಪಿ-69 ಮತ್ತು ನಿಪಿ-70 ರಂತೆ ಪೋಲಿಸರ ಮುಂದೆ ಹೇಳಿಕೆ ನೀಡಿದ್ದು ಸತ್ಯ ಇದ್ದರೂ ಸಹ ಆರೋಪಿತರು ನಮ್ಮ ಊರಿನವರಾಗಿದ್ದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ.ಹೆಚ್.ಸಿ.ಎಸ್. ವಕೀಲರಿಂದ**

ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳುತ್ತಾರೆ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.